# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 BIS 139 2010 | 12691

Date: 19.05.2010

**ಅತೀ ಪ್ರಾಮುಖ್ಯ**

ಇವರಿಗೆ,

ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್.
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯತ್.

ಮಾನ್ಯರೇ,

ವಿಷಯ : ಬಸವ ಇಂದಿರಾ ವಸತಿ ಯೋಜನೆಯನ್ನು ಮರು ನಾಮಕರಣ ಮಾಡಲಾಗಿರುವ ಬಗ್ಗೆ.
ಉಲ್ಲೇಖ 1 ಸರ್ಕಾರದ ಪತ್ರ ಸಂಖ್ಯೆ: ವಇ 29 ಹೆಚ್‌ಎಹೆಚ್ 2010, ದಿನಾಂಕ: 18.05.2010.
2 ಸರ್ಕಾರದ ಪತ್ರ ಸಂಖ್ಯೆ: ವಇ 1 ಹೆಚ್‌ಎಹೆಚ್ 2011 (ಭಾ-1) ಬೆಂಗಳೂರು, ದಿನಾಂಕ: 17.05.2011.

--------

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿನ ಫಲಾನುಭವಿಗಳು ವಸತಿ ಯೋಜನೆಗಳಡಿಯಲ್ಲಿ ನೀಡಲಾಗುವ ಅನುದಾನದಲ್ಲಿ ಕಟ್ಟಡ ಸಾಮಾಗ್ರಿಗಳು ಹಾಗೂ ಕೂಲಿ ದರಗಳಲ್ಲಿ ಗಣನೀಯ ಹೆಚ್ಚಳವಾದ್ದರಿಂದ ಮನೆಗಳನ್ನು ನಿರ್ಮಿಸಿಕೊಳ್ಳಲಾಗದೇ ಇರುವ ಪರಿಸ್ಥಿತಿಯನ್ನು ಗಮನಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಎರಡು ಯೋಜನೆಯಗಳನ್ನು ಒಗ್ಗೂಡಿಸಿ ಎರಡೂ ಸರ್ಕಾರಗಳ ಸಹಾಯಧನದ ಜೊತೆಗೆ ಸಾಲ ಹಾಗೂ ಫಲಾನುಭವಿ ವಂತಿಗೆ ಸೇರಿಸಿ ಘಟಕ ವೆಚ್ಚವನ್ನು ಹೆಚ್ಚಳ ಮಾಡಲು ಉದ್ದೇಶಿಸಿ ಉಲ್ಲೇಖ ಪತ್ರ (1)ರ ಸರ್ಕಾರದ ಪತ್ರದಲ್ಲಿ ರಾಜ್ಯ ಸರ್ಕಾರದ ಗ್ರಾಮೀಣ ಆಶ್ರಯ ಯೋಜನೆ ಮತ್ತು ಕೇಂದ್ರ ಸರ್ಕಾರದ ಇಂದಿರಾ ಆವಾಸ್ ಯೋಜನೆಗಳನ್ನು ಸಂಯೋಜಿಸಿ ಹೊಸದಾಗಿ **"ಬಸವ-ಇಂದಿರಾ ವಸತಿ ಯೋಜನೆ"** ನಾಮಕರಣ ಈ ಹೊಸ ಯೋಜನೆಯಡಿ ಗುರಿ ನಿಗದಿಪಡಿಸಿ ಫಲಾನುಭವಿಗಳ ಆಯ್ಕೆ, ಅನುಮೋದನೆ, ಅನುಷ್ಠಾನ ಹಾಗೂ ಅನುದಾನ ಬಿಡುಗಡೆಯ ಬಗ್ಗೆ ಹಾಗೂ ಈ ಯೋಜನೆಯಡಿ ಪಾಲಿಸಬೇಕಾದ ನಿಯಮಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

ಆದರೆ ಈ ಸಂಯೋಜಿಸಲಾದ ಕ್ರಮಕ್ಕೆ ಕೇಂದ್ರ ಸರ್ಕಾರವು ತನ್ನ ಆಕ್ಷೇಪಣೆಯನ್ನು ಸಲ್ಲಿಸಿರುವ ಹಿನ್ನಲೆಯಲ್ಲಿ ಇಂದಿರಾ ಆವಾಸ್ ಯೋಜನೆಯನ್ನು ಪ್ರತ್ಯೇಕವಾಗಿ ಅನುಷ್ಠಾನಗೊಳಸಲು ಉದ್ದೇಶಿಸಿ ಬಸವ ಇಂದಿರಾ ಆವಾಸ್ ಯೋಜನೆಯನ್ನು ಹೆಸರನ್ನು ಬದಲಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಸರ್ಕಾರವು ಉಲ್ಲೇಖ ಪತ್ರ (2) ರಲ್ಲಿ ಆದೇಶವನ್ನು ಹೊರಡಿಸಿ ಬಸವ ಇಂದಿರಾ ವಸತಿ ಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬೇರ್ಪಡಿಸಿ "ಬಸವ ವಸತಿ ಯೋಜನೆ" ಎಂದು ಪ್ರತ್ಯೇಕಿಸಿ ರಾಜ್ಯಸರ್ಕಾರದ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಸಲು ಆದೇಶಿಸಿದೆ.

ಈ ಹಿನ್ನಲೆಯಲ್ಲಿ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ.

1. ಇನ್ನು ಮುಂದೆ "ಬಸವ ಇಂದಿರಾ ವಸತಿ ಯೋಜನೆ" ಯನ್ನು "ಬಸವ ವಸತಿ ಯೋಜನೆ" ಎಂದು ತಿದ್ದುಪಡಿ ಮಾಡಿಕೊಂಡು ಎಲ್ಲಾ ದಾಖಲೀಕರಣಗಳಲ್ಲಿ ಬಸವ ವಸತಿ ಯೋಜನೆ ಎಂದು ನಮೂದಿಸಿಕೊಳ್ಳಲು ತಿಳಸಿದೆ. ಈಗಾಗಲೇ ನೋಂದಣಿಯಾಗಿದ್ದ ಪಕ್ಷದಲ್ಲಿ ಅಂತಹ ಪ್ರಕರಣಗಳನ್ನು ಹೊರತುಪಡಿಸಿ ಇಂದಿನಿಂದ ನೋಂದಾಯಿಸುವ ಎಲ್ಲಾ ದಾಖಲೆಗಳಲ್ಲಿ ಬಸವ ವಸತಿ ಯೋಜನೆ ಎಂದು ನಮೂದಿಸಲು ತಿಳಸಲಾಗಿದೆ.



ನೋಂದಾಯಿತ ಕಛೇರಿ : ಸ.ನಂ. 205, ಬೀಡಿ ಕಾರ್ಮಿಕರ ಕಾಲೋನಿ ಎದುರು, ಕೊಮ್ಮಘಟ್ಟ ರಸ್ತೆ, ಬಂಡೇಮಠ, ಕೆಂಗೇರಿ ಉಪನಗರ, ಬೆಂಗಳೂರು – 560 060

2. ಬಸವ ವಸತಿ ಯೋಜನೆ ರಾಜ್ಯ ಸರ್ಕಾರದ ಮಾರ್ಗಸೂಚಿಗಳಂತೆ ಅನುಷ್ಠಾನಗೊಳ್ಳಬೇಕಿರುವುದರಿಂದ ಇನ್ನು ಮುಂದೆ ಬಸವ ವಸತಿ ಯೋಜನೆಯಡಿ ಆಯ್ಕೆಯಾಗುವ ಫಲಾನುಭವಿಯು ಬಡತನ ರೇಖೆಗಿಂತ (ಬಿ.ಪಿ.ಎಲ್.) ಕೆಳಗಿರುವ ವರ್ಗಕ್ಕೆ ಸೇರಿದವರಾಗಿದ್ದು ಆರ್ಥಿಕವಾಗಿ ಹಿಂದುಳಿದಿದ್ದು ವಾರ್ಷಿಕ ಆದಾಯವು ಗರಿಷ್ಟ ರೂ. 11800/- ರ ಒಳಗಿರಬೇಕು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

N. S.

ಎನ್.ಎಸ್. ಮಹದೇವ ಪ್ರಸಾದ್
ಪ್ರಧಾನ ವ್ಯವಸ್ಥಾಪಕರು
(ಕಾರ್ಯಕ್ರಮ ಅನುಷ್ಠಾನ)

ಪ್ರತಿಯನ್ನು:

1. ಜಿಲ್ಲೆಯಡಿ ಬರುವ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಶಾಸಕರುಗಳ ಆದ್ಯ ಗಮನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
3. ಎಲ್ಲಾ ವಿಭಾಗಿಯ ಆಯುಕ್ತರು, ಬೆಂಗಳೂರು ವಿಭಾಗ, ಮೈಸೂರು ವಿಭಾಗ, ಬೆಳಗಾಂ ವಿಭಾಗ ಮತ್ತು ಗುಲ್ಬರ್ಗಾ ವಿಭಾಗ ಇವರ ಮಾಹಿತಿಗಾಗಿ ಕಳುಹಿಸಿಕೊಡುತ್ತಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಮ್ಮಿಂದ ಕಟ್ಟುನಿಟ್ಟಿನ ನಿರ್ದೇಶನ ನೀಡಲು ಕೋರಿದೆ.

---